7. ಕಾಯ್ದೆಯಲ್ಲಿನ ಉಲ್ಲಂಘನೆಗಳಿಗೆ ಸಂಬಂಧಪಟ್ಟಂತೆ ಮೇಲಿನ ಅವಧಿಗೆ ಒಟ್ಟು 208 ಪ್ರಕರಣಗಳನ್ನು ದಾಖಲೆ ಮಾಡಲಾಗಿದೆ.

ಭಟ್ಕಳ ಕಂದಾಯ ವಿಭಾಗದಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಮೀನು.

2911:(3929)

ಶ್ರೀ ಶಿವಾನಂದ ನಾಯ್ಕ (ಭಟ್ಕಳ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ಕಂದಾಯ ವಿಭಾಗದಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಕಂದಾಯ ಇಲಾಖೆಯವರು ಅರಣ್ಯ ಇಲಾಖೆಯ ಗಮನಕ್ಕೆ ತರದೇ ಪಟ್ಟಾ ನೀಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಒಟ್ಟು ಎಷ್ಟು ವಿಸ್ತೀರ್ಣ ಅರಣ್ಯ ಜಮೀನನ್ನು ಕಂದಾಯ ಇಲಾಖೆಯವರು (ಹಂಗಾಮಿ ಲಾಗಣಿ) (ತೊರೆದು ಬಂದ ಜಾಗ) ಇತ್ಯಾದಿಯಾಗಿ ಮಂಜೂರು ಮಾಡಿರುತ್ತಾರೆ.

ಇ) ಈ ಬಗ್ಗೆ ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮಗಳೇನು?

ಈ) ಈ ಕಂದಾಯ ಇಲಾಖೆಯ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ:ಆರ್ 106 ಎಲ್‌ಜಿಪಿ 88, ಬೆಂಗಳೂರು, ದಿನಾಂಕ 6-3-88ರಲ್ಲಿ ಕಂದಾಯ ಇಲಾಖೆಗೆ ನೀಡಲಾದ ಅಧಿಕಾರದ ಮೇರೆಗೆ ಕಂದಾಯ ಇಲಾಖೆಯವರು ಕ್ರಮ ಕೈಗೊಳ್ಳುತ್ತಿದ್ದಾರೆ. ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸನ್ 1964 ರಿಂದ 1989ರವರೆಗೆ 65689 ಎಕರೆ ಅರಣ್ಯ ಜಮೀನನ್ನು ಕಂದಾಯ ಇಲಾಖೆಗೆ ಬಿಟ್ಟು ಕೊಟ್ಟಿದ್ದು, ಅವುಗಳಲ್ಲಿ 19529 ಎಕರೆ ಅರಣ್ಯ ಜಮೀನನ್ನು 1970ನೇ ಇಸ್ವಿಯಲ್ಲಿ 6158 ಜನರಿಗೆ ಕಂದಾಯ ಇಲಾಖೆಯವರು ಮಂಜೂರು ಮಾಡಿರುವುದು ಇರುತ್ತದೆ. ಸದರಿ ಹಂಗಾಮಿ ಲಾಗಣಿಗೆ ನೀಡಿದ ಜಮೀನನ್ನು ಖಾಯ, ಲಾಗಣಿಗೆ ಪರಿವರ್ತಿಸಿ, ಮಂಜೂರಿ ನೀಡಲು ಕಂದಾಯ ಇಲಾಖೆಗೆ ಸರಕಾರಿ ಆದೇಶ ನಂ:ಆರ್‌ಡಿ 106 ಎಲ್‌ಜಿಪಿ 88, ಬೆಂಗಳೂರು

ದಿನಾಂಕ 6-3-88 ರಂತೆ ಅಧಿಕಾರ ನೀಡಿರುತ್ತದೆ. ಅದರಂತೆ ಸರಕಾರಿ ಆದೇಶ ಸಂಖ್ಯೆ:ಆರ್‌ಡಿ 31 ಎಲ್‌ಜಿಎನ್ 87 (ಭಾಗ) ದಿನಾಂಕ 20-4-94 ರಂತೆ ಆದೇಶದ ಪರಿಕ್ರಮದಲ್ಲಿ ನಮೂದಿಸಿದಂತೆ 25 ವರ್ಷಗಳ ಹಂಗಾಮಿ ಲಾಗಣಿ ನೀಡಿದ ಜಮೀನಿನಲ್ಲಿ ಅನೇಕ ಬದಲಾವಣೆಗಳು ಆಗುವುದರಿಂದ ಅನೇಕ ಕಾರಣಗಳಿಂದ ಮೂಲ ಮಂಜೂರಿದಾರರು ಸಾಗುವಳಿ ಮಾಡುತ್ತಿದ್ದಲ್ಲಿ ನಿಯಮ 27 ಮತ್ತು 23ರನ್ನು ಸಡಲಿಸಿ, ಸಂದರ್ಭಾನುಸಾರ ಹಂಗಾಮಿ ಲಾಗಣಿಯನ್ನು ಖಾಯಂ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಿರುತ್ತಾರೆ. ಭಟ್ಕಳ ಕಂದಾಯ ವಿಭಾಗದಲ್ಲಿ ಹಂಗಾಮಿ ಲಾಗಣಿ ತೊರೆದು ಬಂದ 56 ಪ್ರಕರಣಗಳಲ್ಲಿ ಅವುಗಳಿಂದ 31.27 ಎಕರೆ ಜಮೀನನ್ನು ಮೂಲ ಮಂಜೂರಿದಾರರನ್ನು ಹೊರತುಪಡಿಸಿ ಬಹಳ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಇತರ ಖಾಯಂ ಮಂಜೂರಿ ಮಾಡಿರುತ್ತದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸರ್ಕಾರಿ ಆದೇಶ ಪ್ರಕಾರ ಕಂದಾಯ ಇಲಾಖೆಯವರು ಕ್ರಮ ಕೈಗೊಂಡಿರುವುದರಿಂದ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಸರ್ಕಾರಿ ಆದೇಶ ಮೀರಿ ಕಂದಾಯ ಇಲಾಖೆಯವರಿಂದ ಅಂತಹ ಪ್ರಕರಣ ಜರುಗಿದ್ದ ಪಕ್ಷದಲ್ಲಿ ಕಂದಾಯ ಇಲಾಖೆಯಿಂದ ಕ್ರಮ ಕೈಗೊಳ್ಳಬೇಕು.

ಸಮುದ್ರದಲ್ಲಿ ಮತ್ಸ್ಯ ಕ್ಷಾಮ ಉಂಟಾಗಿರುವುದು

2912:(3931)

ಶ್ರೀ ಶಿವಾನಂದ ನಾಯ್ಕ (ಭಟ್ಕಳ್): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ಸಮುದ್ರದಲ್ಲಿ ಮತ್ಸ್ಯಕ್ಷಾಮ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಆ) ವಿದೇಶಿ ಹಡಗುಗಳು ಅಕ್ರಮವಾಗಿ ಆಳ ಸಮುದ್ರ ಮೀನುಗಾರಿಕೆ (ಡೀಪ್ ಸಿ ಫಿಶಿಂಗ್) ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಿಂದಿನ 15 ವರ್ಷಗಳಲ್ಲಿ ಇದ್ದ ಡೀಸೆಲ್‌ನ ದರ ಎಷ್ಟು; ಆಗ ಮೀನುಗಾರರಿಗೆ ಕೊಡುತ್ತಿದ್ದ ಸಬ್ಸಿಡಿ ದರ ಮತ್ತು ಈಗ ಕೊಡುತ್ತಿರುವ ಡೀಸೆಲ್ ಸಬ್ಸಿಡಿ ದರ ಯಾವ ಆಧಾರದ ಮೇಲೆ ನಿರ್ಧರಿತವಾಗಿದೆ; ಡೀಸೆಲ್ ಸಬ್ಸಿಡಿ ದರ ಹೆಚ್ಚಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?